**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -673/2017**
**ಚಾಸಾ - 06 / ಪ್ರಾಸಾ - 06**

| | |
|---|---|
| ಹೆಸರು | **ಜಿ. ಗಂಗರಾಜು** |
| ತಂದೆಯ ಹೆಸರು | **ಗಾಳಿವೆಂಕಟಯ್ಯ** |
| ವಯಸ್ಸು | **52** |
| ಉದ್ಯೋಗ | **ಚಾಲಕ** |
| ವಿಳಾಸ | **ಜಟ್ಟಿಪಾಳ್ಯ** |

ದಿನಾಂಕ: **19-12-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ಈಗ ಸಾಕ್ಷಿಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಸುಮಾರು 10 ವರ್ಷಗಳ ಹಿಂದೆ ಲಕ್ಕುಪ್ಪೆ ಗೇಟ್ ಬಳಿ ಅಪಘಾತ ಆದ ಸ್ಥಳದಲ್ಲಿ ನಾನು ನಿಪಿ-2 ಕ್ಕೆ ಸಹಿಯನ್ನು ಮಾಡಿರುತ್ತೇನೆ. ನನ್ನ ಜೊತೆ ನಿಪಿ-2 ಕ್ಕೆ ಪ್ರಾಸಾ-2 ಮತ್ತು 4 ರವರು ಸಹಿಯನ್ನು ಮಾಡಿದ್ದಾರೆ. ಟಾಟ ಇಂಡಿಕಾ ಮತ್ತು ಪಲ್ಸರ್ ವಾಹನದ ನಡುವೆ ಆಗಿರುವ ಅಪಘಾತಕ್ಕೆ ಸಂಬಂಧಿಸಿದಂತೆ ಪಂಚನಾಮೆಯನ್ನು ಮಾಡಿ ನನ್ನಿಂ ದ ನಿಪಿ-2 ಕ್ಕೆ ಸಹಿಯನ್ನು ಪಡೆದುಕೊಂಡರು. ಸದರಿ ವಾಹನಗಳನ್ನು ಪೋಲೀಸರು ಠಾಣೆಗೆ ತೆಗೆದುಕೊಂಡು ಹೋದರು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮಾಿವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿ.10-10-2016 ರಂದು ಬೆಳಗ್ಗೆ 8 ರಿಂದ 8.40 ರ ಸಮಯದಲ್ಲಿ ಪ್ರಾಸಾ-2 ರವರು ತೋರಿಸಿದ ಜಾಗದಲ್ಲಿ ಪೋಲೀಸರು ನಿಪಿ-2 ರಂತೆ ಪಂಚನಾಮೆಯನ್ನು ಮಾಡಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಟಾಟಾ ಇಂಡಿಕಾ ವಿ-2 ಕಾರಿನ ಸಂ. ಕೆಎ-53-ಬಿ-2774 ಮತ್ತು ಬಜಾಜ್ ಪಲ್ಸರ್ ದ್ವಿಚಕ್ರ ವಾಹನ ಸಂ. ಕೆಎ-41-ಇಇ-4638 ನ್ನು ವಶಪಡಿಸಿಕೊಂಡರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಪಂಚನಾಮೆಯನ್ನು ಮಾಡುವ ಸಮಯದಲ್ಲಿ ಪೋಲೀಸರು ಒಂದು ಕಚ್ಚಾ ನಕ್ಷೆಯನ್ನು ತಯಾರು ಮಾಡಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಪ್ರಕರಣವು ನಡೆದು ಸುಮಾರು 8 ವರ್ಷ ಆಗಿರುವ ಕಾರಣದಿಂದ ಈ ಮೇಲೆ ಹೇಳಿರುವ ವಿಷಯವನ್ನು ನೀವು ಮರೆತ್ತಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ. ಎ. ಎಸ್. ಎಸ್, ವಕೀಲರಿಂದಃ-**

ಪ್ರಾಸಾ-2 ರವರ ಮಗನಾದ ರವಿಕುಮಾರ್ ರವರಿಗೆ ಅಪಘಾತ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನೀವು ಮತ್ತು ಪ್ರಾಸಾ-2 ರವರು ಒಂದೇ ಊರಿನವರು ಎಂದರೆ ಸಾಕ್ಷಿಯು ಪ್ರಾಸಾ-2 ರವರು ತನ್ನ ಅಣ್ಣ ಎನ್ನುತ್ತಾರೆ. ನಿಪಿ-2 ರಲ್ಲಿ ಇರುವ ವಿಷಯದ ಬಗ್ಗೆ ನನಗೆ ಸಂಪೂರ್ಣವಾಗಿ ಮಾಹಿತಿ ಇರುವುದಿಲ್ಲ. ಪಂಚನಾಮೆಗೆ ಸಹಕರಿಸುವಂತೆ ಹೇಳಿ ಪೋಲೀಸರು ನನಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ನೀವು ಪ್ರಾಸಾ-2 ರವರ ಜೊತೆಯಲ್ಲಿ ಠಾಣೆಗೆ ಹೋಗಿ ಠಾಣೆಯಲ್ಲಿಯೇ ನಿಪಿ-2 ಕ್ಕೆ ನಿಮ್ಮ ಸಹಿಯನ್ನು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈ ಮೇಲೆ ಹೇಳಿರುವ

2 ವಾಹನಗಳನ್ನು ನೀವು ಠಾಣೆಯಲ್ಲಿ ನೋಡಿರುತ್ತೀರಾ ಎಂದರೆ ಸಾಕ್ಷಿಯು ಅಪಘಾತ ನಡೆದ ಸ್ಥಳದಲ್ಲಿ ಸದರಿ ವಾಹನಗಳನ್ನು ನೋಡಿದ್ದೇನೆ ಎನ್ನುತ್ತಾರೆ. ನಿಪಿ-8 ನ್ನು ನೀವು ಠಾಣೆಯಲ್ಲಿ ನೋಡಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಫ್ರಾಸಾ-2 ರವರು ನಿಮ್ಮ ಅಣ್ಣನಾಗಿರುವ ಕಾರಣದಿಂದ ಅವರಿಗೆ ಪರಿಹಾರದ ಹಣ ಬರಬೇಕು ಎಂಬ ಉದ್ದೇಶದಿಂದ ನೀವು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**